**<u>ಸಾಕ್ಷಿಯನ್ನು ದಿಃ 25.06.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. M.R.N.ವಕೀಲರಿಂದ.</u>**

ನನ್ನ ತಾತ ಅಂದಾನಿಗೌಡ ಅವರಿಗೆ ಕ್ರಯ ಪತ್ರ ಆದಾಗ ಸರ್ವೆ ನಂ 81 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತೆಂದು ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಮಾರಾಟ ಮಾಡಿದು ವ್ಯಕ್ತಿಯ ಹೆಸರು ರಂಗಮ್ಮಾ ಆಗಿರುತ್ತಾರೆ ಅವರ ಗಂಡನ ಹೆಸರು ಗೊತ್ತಿಲ್ಲವೆಂದು ಹೇಳುತ್ತಾರೆ. ನಿ.ಪಿ 21 ರಲ್ಲಿ ಸರ್ವೆ ನಂ 81/2 ರಲ್ಲಿ 1 ಎಕರೆ 30 ಗುಂಟೆ ಎಂದು ಬರೆದಿದ್ದು ನನ್ನ ತಾತ ಕ್ರಯ ಪತ್ರ ಮಾಡಿಕೊಂಡಿದ್ದು ಬರೆದಿರುತ್ತಾರೆ ಯಾವ ವರ್ಷವೆಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನನ್ನ ತಾತನಿಗೆ ಕ್ರಯ ಪತ್ರ ಮಾಡಿಕೊಟ್ಟ ಮಾಲಿಕರು ರಂಗಮ್ಮಾ ಕೋಂ ಮರಿಗೌಡ ಆಗಿದ್ದು ನಿ.ಪಿ 22 ರಲ್ಲಿ ಸರ್ವೆ ನಂ 81/2 ರಲ್ಲಿ ರಂಗಮ್ಮಾ ಕೋಂ ಲಕ್ಕಣ್ಣ ಎಂದು ಇದ್ದು ಅದು ಬೇರೆ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನಮಗೆ ಮಾರಾಟ ಮಾಡಿದ ವ್ಯಕ್ತಿ ರಂಗಮ್ಮಾ ಕೋಂ ಮರಿಗೌಡ ಆಗಿದ್ದು ರಂಗಮ್ಮಾ ಕೋಂ ಲಕ್ಕಣ್ಣ ಬೇರೆ ಬೇರೆ ಎಂದರೆ ಸಾಕ್ಷಿ ಅದು ತಪ್ಪು ಎಂದು ಹೇಳುತ್ತಾರೆ. ನಮ್ಮ ಜಾಗದಲ್ಲಿ ರಸ್ತೆ ಹೋಗಿರುವುದಿಲ್ಲ ಮೊದಲು ಕೊರಕಲು ಹೋಗಿದ್ದು ಈಗ ಇರುವುದಿಲ್ಲವೆಂದು ಹೇಳುತ್ತಾರೆ. 8 ಗುಂಟೆ ಕೊರಕಲು ಇತ್ತು ಎಂದು ಹೇಳುತ್ತಾರೆ. ಈಗ ಕೊರಕಲು ಮುಚ್ಚಿ ಹೋಗಿ ವ್ಯವಸಾಯ ಜಮೀನು ಆಗಿರುತ್ತದೆ.

ನಿ.ಪಿ 23 ಅನ್ನು ವಿಸ್ತೀರ್ಣವನ್ನು ತಿದ್ದಲಾಗಿದೆ ಎಂದರೆ ಸಾಕ್ಷಿ ನಾನು ತಿದ್ದಿಲ್ಲವೆಂದು ಹೇಳುತ್ತಾರೆ. ನಿ.ಪಿ 23 ಅನ್ನು ತಿದ್ದಲಾಗಿ ಅದರಲ್ಲಿರುವ ವಿಸ್ತೀರ್ಣಗಳು ಒಂದಕ್ಕೊಂದು ತಾಳೆ ಆಗುತ್ತಿಲ್ಲವೆಂದರೆ ಸರಿಯಲ್ಲ. ನಿ.ಪಿ 26 ರಲ್ಲಿ ಸರ್ವೆನಂ 81 ರಲ್ಲಿ ಸರ್ಕಾರಿ 11 ಎಕರೆ 10 ಗುಂಟೆ ಇದ್ದು ನಮಗೆ ಮಾರಾಟ ಮಾಡಿದ ಜಮೀನಿನ ನಿಖರತೆ ಗೊತ್ತಿಲ್ಲ ನಾನು ಸುಳ್ಳು ದಾವೆ ಸಲ್ಲಿಸಿದ್ದೆನೆಂದರೆ ಸಾಕ್ಷಿ ಒಟ್ಟೆಗೆ ತೋರಿಸಿರಬಹುದೆಂದು ಹೇಳುತ್ತಾರೆ.

ನಿ.ಪಿ 21 ಮತ್ತು ವಾದ ಪತ್ರದಲ್ಲಿ ತೋರಿಸಿರುವ ವಿಸ್ತೀರ್ಣ ವ್ಯತ್ಯಾಸ ಇದ್ದು ದಾವೆ ವಜಾ ಆದಲ್ಲಿ ನನಗೆ ಯಾವುದೆ ತೊಂದರೆ ಆಗುವುದಿಲ್ಲವೆಂದರೆ ಸರಿಯಲ್ಲ. ನನಗೆ ಕ್ರಯಪತ್ರ ಮಾಡಿಕೊಟ್ಟ ರಂಗಮ್ಮಾ ಅವರು ನಿ.ಪಿ 20 ರಲ್ಲಿರುವ ರಂಗಮ್ಮಾ ಅವರು ಬೇರೆ ಬೇರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.